

ಯಮಧರ್ಮ ರಾಜ, ಹಿರಣ್ಯ ಕಶಿಪು, ರಾಮದಾಸ್, ದಶರಥ, ರಾಜ ರಾಜ ನರೇಂದ್ರ, ಬಾಹುಕ, ಚಾಣಕ್ಯ ಹೀಗೆ ಇಂತಹ ಪಾತ್ರಗಳಿಗೆ ಹೊಸ ರೂಪ ಕೊಡುವುದರಲ್ಲಿ ಸೈ ಎನ್ನಿಸಿಕೊಂಡ ಅವರು ಎಲ್ಲಾ ಪಾತ್ರಗಳಲ್ಲೂ ಪರಕಾಯ ಪ್ರವೇಶ ಮಾಡಿದ್ದಷ್ಟೇ ಅಲ್ಲ, ಸನ್ನಿವೇಶಕ್ಕೆ ತಕ್ಕಂತೆ ಸಹಜ ಅಭಿನಯವನ್ನು ಕೊಟ್ಟ ಅದ್ಭುತ ನಟರೆನ್ನಿಸಿಕೊಂಡರು.

ಪೃಥ್ವಿರಾಜ್ (ಲೇ: ಕೆ. ಭೀಮರಾವ್) ಹಾಗೂ ತಾಳಿಕೋಟೆ (ಲೇ: ಮಾಸ್ತಿ ವೆಂಕಟೇಶ ಅಯ್ಯಂಗಾರ್) ನಾಟಕಗಳಲ್ಲಿ ಪೃಥ್ವಿರಾಜ್ ಮತ್ತು ಉಸ್ಮಾನ್ ಪಾತ್ರಗಳು ರಾಘವರ ಅಭಿನಯದಲ್ಲಿ ಕನ್ನಡ ವೃತ್ತಿ ರಂಗಭೂಮಿ ಮೈಲಿಗಲ್ಲುಗಳೆನ್ನಿಸಿಕೊಂಡವು.

ತಾಡಪತ್ರಿ ರಾಘವಾಚಾರ್ಯ ಎಂಬ ಪೂರ್ಣ ಹೆಸರಿನ ರಾಘವರು ರಂಗಭೂಮಿಯಿಂದ ಸಮಾಜ ಪರಿವರ್ತನೆ ಮಾಡಬಹುದೆಂಬ ನಂಬಿಕೆ ಇಟ್ಟುಕೊಂಡು ಅದರತ್ತ ಹೆಜ್ಜೆ ಹಾಕಿದ ಪ್ರಯೋಗಶೀಲರು. ಕನ್ನಡ, ತೆಲುಗು, ಇಂಗ್ಲಿಷ್ ಭಾಷೆಯ ನಾಟಕಗಳಲ್ಲಿ ಅಸ್ಖಲಿತವಾಗಿ ಸಂಭಾಷಣೆ ಹೇಳುವ ಅಪರೂಪದ, ಅಪ್ರತಿಮ ಕಲಾವಿದರು ಅವರು.

'ವಿಜಯನಗರ ಸಾಮ್ರಾಜ್ಯ ಪತನಂ' ನಾಟಕದಲ್ಲಿ ಪಠಾಣ್ ಪಾತ್ರಧಾರಿಯಾಗಿ ರಾಘವ ಬೀರಿದ ಪರಿಣಾಮ ವೃತ್ತಿ ರಂಗ ಭೂಮಿಯ ಮೇಲೆ ಬಹುಕಾಲವಿತ್ತು. ಜೀವಂತ ಕುದುರೆ ಮೇಲೆ ಕುಳಿತು ರಂಗ ಪ್ರವೇಶ ಮಾಡುತ್ತಿದ್ದ ರಾಘವರು ಆ ದೃಶ್ಯದುದ್ದಕ್ಕೂ ಮಾಡುತ್ತಿದ್ದ ಭಾವಾಭಿನಯ, ಹೇಳುತ್ತಿದ್ದ ಸಂಭಾಷಣೆ, ಉಪಯೋಗಿಸುತ್ತಿದ್ದ ದೇಹ ಭಾಷೆ, ಪ್ರಬುದ್ಧ ನಟನೊಬ್ಬನನ್ನು ಈ ನಾಡು ಕಾಣುವಂತೆ ಮಾಡಿತ್ತು.

'ಸತ್ಯವಾನ್ ಸಾವಿತ್ರಿ' ನಾಟಕದಲ್ಲಿ ಯಮಧರ್ಮನ ಪಾತ್ರ ರಾಘವರಿಗೆ ಹೆಸರು ತಂದು ಕೊಟ್ಟ ಪಾತ್ರಗಳಲ್ಲೊಂದು. ಸಾಧಾರಣವಾಗಿ ಯಮನನ್ನು ಎಲ್ಲರೂ ರೌದ್ರರೂಪದಲ್ಲಿಯೇ ಬಿಂಬಿಸುವುದು ಸಾಮಾನ್ಯ. ಅಂತಹ ಯಮನಿಗೆ ಸೌಮ್ಯ ರೂಪ ಕೊಟ್ಟು ಪ್ರೇಕ್ಷಕರಿಗೆ ಅಚ್ಚರಿ ತಂದರು. ಅಭಿನಯದಲ್ಲಿ ಸಂಪೂರ್ಣ ತಲ್ಲೀನರಾದ ಸಂದರ್ಭದಲ್ಲಿಯೇ ನೋಡುಗರ ಪ್ರತಿಕ್ರಿಯೆಯನ್ನು ಗಮನಿಸುತ್ತ ನಾಟಕ ಮುನ್ನಡೆಸುವ ಕಸಬುಗಾರಿಕೆ ರಾಘವರ ವಿಶೇಷ ಗುಣವಾತ್ತು.

ಬಳ್ಳಾರಿ ರಾಘವರು 'ಭಕ್ತ ರಾಮದಾಸು' ಪಾತ್ರಧಾರಿಯಾಗಿ ಎರಡು ವಿಭಿನ್ನ ಘಟ್ಟಗಳನ್ನು ಅರ್ಥಪೂರ್ಣವಾಗಿ ನಿರ್ವಹಿಸಿ ಆಗಿನ ಕಾಲದ ಕಂಪೆನಿ ನಾಟಕಗಳ ಹಳೆಯ ಮಾದರಿಯನ್ನು ಬದಲಿಸುವಂತೆ ಮಾಡಿದರು. ಸಾಮಾನ್ಯ ವ್ಯಕ್ತಿ ಗೋಪನ್ನ ಶ್ರೀರಾಮನ ಮೇಲೆ ಭಕ್ತಿ ಹುಟ್ಟಿದ ಬಳಿಕ ಬದಲಾಗುವ ನಾಟಕ ಅದು. ಕೇವಲ ವೇಷ ಭೂಷಣಗಳು ಮಾತ್ರವಲ್ಲ ಇಡೀ ಆತನ ವ್ಯಕ್ತಿತ್ವವನ್ನೇ ಶ್ರೀ ರಾಮಭಕ್ತಿಯತ್ತ ತಿರುಗಿಸುವಂತಹ ರೂಪಾಂತರ ಮಾಡಿದ್ದು ರಾಘವರ ನಟನಾ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿತ್ತು. ⌘